ಅಧಿಕಾರಿಗಳಿಗೆ ಸ್ಥಳ ನಿಯುಕ್ತಿಗೊಳಿಸುವುದು

ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ : 21 (693)

ಶ್ರೀ. ವಿಜಯಕುಮಾರ್ ಬಿ.ಎಸ್. (ಜಯನಗರ):

ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.

ಅ) ರಾಜ್ಯ ಸರ್ಕಾರದಲ್ಲಿ ಸ್ಥಳ ನಿರೀಕ್ಷೆಯಲ್ಲಿರುವ ಐ.ಎ.ಎಸ್., ಐ.ಪಿ.ಎಸ್., ಕೆ.ಎ.ಎಸ್. ಮತ್ತು ಇನ್ನಿತರ ಹಿರಿಯ ಅಧಿಕಾರಿಗಳ ಸಂಖ್ಯೆ ಎಷ್ಟು : (ಸಂಪೂರ್ಣ ವಿವರಗಳನ್ನು ನೀಡುವುದು)

ಆ) ಇವರುಗಳಿಗೆ ಸ್ಥಳ ನಿಯುಕ್ತಗೊಳಿಸಿ ಆದೇಶ ನೀಡದೇ ಇರಲು ಕಾರಣವೇನು;

ಇ) ಇವರುಗಳಿಗೆ ಪ್ರತಿ ತಿಂಗಳು ನೀಡುತ್ತಿರುವ ವೇತನವನ್ನು (ವಿವರ ನೀಡುವುದು);

ಈ) ಹಾಗಿದ್ದಲ್ಲಿ ಈ ಶ್ರೇಣಿಯ ಅಧಿಕಾರಿಗಳಿಗೆ ತಕ್ಷಣ ಸ್ಥಳ ನಿಯುಕ್ತಗೊಳಿಸಿ ಆದೇಶ ನೀಡಲು ಕೈಕೊಂಡಿರುವ ಕ್ರಮಗಳೇನು;

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯ ಮಂತ್ರಿಯವರು):

ಅ) 1.ಐ.ಎ.ಎಸ್. ವೃಂದದಲ್ಲಿ ಇಬ್ಬರು ಅಧಿಕಾರಿಗಳು ಸ್ಥಳ ನಿರೀಕ್ಷಣೆಯಲ್ಲಿರುತ್ತಾರೆ.

1. ಶ್ರೀ ಮಹ್ಮದ್ ಸಲಾವುದ್ದೀನ್. ಐ.ಎ.ಎಸ್. (2) ಎಸ್.ಎನ್. ನಾಗರಾಜ್ ಐ.ಎ.ಎಸ್.
2. ಐ.ಪಿ.ಎಸ್. ವೃಂದದಲ್ಲಿ : ಪ್ರಸ್ತುತ ಯಾವ ಅಧಿಕಾರಿಯು ಸ್ಥಳ ನಿರೀಕ್ಷಣೆಯಲ್ಲಿರುವುದಿಲ್ಲ.
3. ಐ.ಎಫ್.ಎಸ್. ವೃಂದದಲ್ಲಿ : ಒಬ್ಬರು ಅಧಿಕಾರಿ ಸ್ಥಳ ನಿರೀಕ್ಷಣೆಯಲ್ಲಿರುತ್ತಾರೆ – ಶ್ರೀ ಎಸ್. ಶೇಖರ್, ಐ.ಎಫ್.ಎಸ್.)
4. ಕೆ.ಎ.ಎಸ್. ವೃಂದದಲ್ಲಿ – ಪ್ರಸ್ತುತ ಯಾವ ಅಧಿಕಾರಿಯ ಸ್ಥಳ ನಿರೀಕ್ಷಣೆಯಲ್ಲಿರುವುದಿಲ್ಲ.

5. ಇಲಾಖಾ ಮುಖ್ಯಸ್ಥರ ವೃಂದದಲ್ಲಿ – ಪ್ರಸ್ತುತ ಯಾವ ಅಧಿಕಾರಿಯು ಸ್ಥಳ ನಿರೀಕ್ಷಣೆಯಲ್ಲಿರುವುದಿಲ್ಲ.

ಆ) ಆಡಳಿತಾತ್ಮಕ ಕಾರಣಗಳು

ಇ) ಶ್ರೀ ಮಹಮ್ಮದ್ ಸಲಾವುದ್ದೀನ್ : ಐ.ಎ.ಎಸ್, ಇವರ ವೇತನ ರೂ. 28,080/– + ಜಿ.ಪಿ. ರೂ. 6600/– = ಒಟ್ಟು ರೂ. 34,680/– ಮತ್ತು ಅರ್ಹ ಭತ್ಯೆಗಳು

ಶ್ರೀ ಎಸ್. ನಾಗರಾಜು, ಐ.ಎ.ಎಸ್. ಇವರ ವೇತನ ರೂ. 28,080/– + ಜಿ.ಪಿ. ರೂ. 6600/– ಒಟ್ಟು ರೂ. 34,680/– ಮತ್ತು ಅರ್ಹ ಭತ್ಯೆಗಳು

ಶ್ರೀ ಎಸ್. ಶೇಖರ್, ಐ.ಎಫ್.ಎಸ್. ಇವರ ವೇತನ ರೂ. 48,080/– + 8900/– (ಗ್ರೇಡ್ ಪೇ) + 650/– (ಎಫ್‌ಪಿಎ) ಆಗಿರುತ್ತದೆ.

ಈ) ಸ್ಥಳ ನಿರೀಕ್ಷೆಯಲ್ಲಿರುವ ಐ.ಎ.ಎಸ್. ಅಧಿಕಾರಯವರಗೆ ಸೂಕ್ತ ಸ್ಥಳ ನಿಯುಕ್ತಿ ನೀಡಲು ಪರೀಶೀಲಿಸಲಾಗುತ್ತಿದೆ.

ಸ್ಥಳ ನಿರೀಕ್ಷೆಣೆಯಲ್ಲಿರುವ ಎ.ಎಫ್.ಎಸ್. ಅಧಿಕಾರಿಯವರಿಗೆ ಸ್ಥಳ ನಿಯುಕ್ತಿ ನೀಡಲು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಿಂದ ಪ್ರಸ್ತಾವನೆಯನ್ನು ಕೋರಲಾಗಿದೆ.

ಶ್ರೀ ಬಿ.ಎನ್. ವಿಜಯಕುಮಾರ್ : ಮಾನ್ಯ ಮುಖ್ಯಮಂತ್ರಿಗಳು ಉತ್ತರ ಒದಗಿಸಿದ್ದಾರೆ ಅದು ಸರಿಯಾಗಿದೆ ಎಂದು ಭಾವಿಸುತ್ತೇನೆ.

ಶಾಶ್ವತ ನೀರು ಪೂರೈಕೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 22 (682)

ಶ್ರೀ ಚಿಕ್ಕನಗೌಡ್ರು ಸಿದ್ದನಗೌಡ ಈಶ್ವರಗೌಡ (ಕುಂದಗೋಳ):

ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.